ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	149 (194)
ಸದಸ್ಯರ ಹೆಸರು	:	ಶ್ರೀ ರಘುನಾಥ್ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	13-09-2021
ಉತ್ತರಿಸುವವರು	:	ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
1	ಬೀದರ್ ಜಿಲ್ಲೆಯ ಔರಾದ (ಬಿ) ತಾಲ್ಲೂಕಿನಲ್ಲಿ ಜಿಂಕೆಗಳ ಹಾವಳಿ ಹೆಚ್ಚಾಗಿದ್ದು, ಇದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಹಾಗೂ ಬಹಳಷ್ಟು ಪ್ರಮಾಣದಲ್ಲಿ ರೈತರ ಬೆಳೆ ಹಾನಿಹಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಬಂದಿದೆ. ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆ ಹಾನಿ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ: 19.09.2016 ರಲ್ಲಿ ನಿಗದಿಪಡಿಸಿದ ದರಗಳಂತೆ ನಷ್ಟವಾದ ಬೆಳೆಯ ಪ್ರಮಾಣಕ್ಕನುಗುಣವಾಗಿ ಸಂಬಂಧಿತ ರೈತರ ಹೆಸರಿನ ಬ್ಯಾಂಕ್ ಖಾತೆಗೆ ನೇರವಾಗಿ ಇ-ಪರಿಹಾರ ತಂತ್ರಾಂಶದ ಮುಖಾಂತರ ಪರಿಹಾರ ಧನ ಪಾವತಿಸಲಾಗುತ್ತಿದೆ.
2	ಜಿಂಕೆ ಹಾವಳಿಯನ್ನು ತಡೆಗಟ್ಟಲು ಶಾಶ್ವತ ಪರಿಹಾರಕ್ಕೆ ಸರ್ಕಾರವು ಯೋಜನೆ ರೂಪಿಸಿದೆಯೇ; (ವಿವರ ನೀಡುವುದು)	ರಾಜ್ಯದ ಅರಣ್ಯದ ಅಂಚಿನಲ್ಲಿ ಬರುವಂತಹ ಹಿಡುವಳಿ ಜಮೀನುಗಳಲ್ಲಿ ರೈತರು ಬೆಳೆದ ಬೆಳೆಗಳನ್ನು ವನ್ಯಪ್ರಾಣಿಗಳ ದಾಳಿಯಿಂದ ರಕ್ಷಿಸಲು ಸೌರಶಕ್ತಿ ಬೇಲಿ ನಿರ್ಮಿಸಲು ಸಹಾಯ ಧನ ಒದಗಿಸುವ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಈ ಬಗ್ಗೆ ದಿನಾಂಕ: 16.09.2016 ರಂದು ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಪ್ರತಿ ಕಿಲೋ ಮೀಟರ್‌ಗೆ ದರ ರೂ.2.30 ಲಕ್ಷ ನಿಗದಿಪಡಿಸಲಾಗಿದ್ದು, ಇದರಲ್ಲಿ ರೈತರಿಗೆ ಶೇಕಡಾ 50% ಪ್ರತಿಶತ ಸಹಾಯಧನವನ್ನು ನೀಡುವ ಯೋಜನೆ ಜಾರಿಯಲ್ಲಿರುತ್ತದೆ. ಸಹಾಯಧನ ರೂಪದಲ್ಲಿ 13 ಜನ ರೈತರು 7.86 ಕಿ.ಮೀ ಸೌರಶಕ್ತಿ ಬೇಲಿ ನಿರ್ಮಿಸಿಕೊಳ್ಳಲು ಅರ್ಜಿ ಸಲ್ಲಿಸಿರುತ್ತಾರೆ. ಪ್ರಸಕ್ತ ಸಾಲಿಗೆ 40.00 ಕಿ.ಮೀ ಸೌರಶಕ್ತಿ ಬೇಲಿ ನಿರ್ಮಿಸಲು ರೂ.50.00 ಲಕ್ಷ ಅನುದಾನ ಕಲ್ಪಿಸಿದ್ದು, ಈ ಪೈಕಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೀದರ್ ವಿಭಾಗ ಇವರಿಗೆ 2.00 ಕಿ.ಮೀ ಭೌತಿಕ ಗುರಿ ನಿಗದಿಪಡಿಸಿ ರೂ.2.30 ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

<table>
<tr><td>3</td><td>ಜಿಂಕೆಗಳು ರೈತರ ಬೆಳೆ ಹಾನಿ ಮಾಡಿರುವುದರಿಂದ ಸರ್ಕಾರವು / ಅರಣ್ಯ ಇಲಾಖೆಯು ಎಷ್ಟು ಪ್ರಮಾಣದಲ್ಲಿ ರೈತರಿಗೆ ಸಹಾಯಧನ ನೀಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)</td><td>ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆ ಹಾನಿ ಪ್ರಕರಣಗಳಲ್ಲಿ ಇಲಾಖಾ ಸಿಬ್ಬಂದಿಗಳು ಸ್ಥಳ ಪರಿಶೀಲನೆ ನಡೆಸಿ, ಹಾನಿ ಉಂಟಾಗಿರುವ ಬೆಳೆಯ ಮೌಲ್ಯಮಾಪನ ಮಾಡಿ ಸರ್ಕಾರಿ ಆದೇಶ ಸಂಖ್ಯೆ: ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ: 19.09.2016 ರನ್ವಯ ನಿಗದಿಪಡಿಸಿದ ದರಗಳಿಗೆ ಸೀಮಿತಗೊಳಿಸಿ, ಸರ್ಕಾರಿ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ: 30.04.2011 ರಲ್ಲಿ ಪರಿಹಾರ ಧನ ಮಂಜೂರು ಮಾಡಲು ವಿಧಿಸಿರುವ ವಿತ್ತಾಧಿಕಾರದಂತೆ ಪಾವತಿಸಲಾಗುತ್ತಿದೆ.

ಕಳೆದ 2 ವರ್ಷಗಳಿಂದ ಉಂಟಾದ ಬೆಳೆಹಾನಿ ಪ್ರಕರಣ ಹಾಗೂ ಪಾವತಿಸಿದ ದಯಾತ್ಮಕ ಧನದ ವಿವರ ಈ ಕೆಳಕಂಡಂತಿವೆ.

(ರೂ.ಗಳಲ್ಲಿ)
<table>
<tr><th>ವರ್ಷ</th><th>ಪ್ರಕರಣ</th><th>ಮೊತ್ತ</th></tr>
<tr><td>2019-20</td><td>88</td><td>3,80,265.00</td></tr>
<tr><td>2020-21</td><td>112</td><td>4,73,207.00</td></tr>
<tr><td>2021-22</td><td>69</td><td>3,74,937.00</td></tr>
<tr><td>ಒಟ್ಟು</td><td>269</td><td>12,28,409.00</td></tr>
</table>
</td></tr>
<tr><td>4</td><td>ಜಿಂಕೆಗಳ ಹಾವಳಿ ತಪ್ಪಿಸಲು ತಾಲ್ಲೂಕಿನಲ್ಲಿ ಟ್ರೀ ಪಾರ್ಕ್/ ಜಿಂಕೆಗಳ ಪಾರ್ಕ್ ನಿರ್ಮಾಣದ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ಸ್ಪಷ್ಟ ಮಾಹಿತಿ ಒದಗಿಸುವುದು)</td><td>ಜಿಂಕೆಗಳ ಹಾವಳಿ ತಪ್ಪಿಸಲು ಟ್ರೀ-ಪಾರ್ಕ್ / ಜಿಂಕೆಗಳ ಪಾರ್ಕ್ ನಿರ್ಮಾಣ ಮಾಡಲು ಯಾವುದೆ ಪ್ರಸ್ತಾವನೆ ಇರುವುದಿಲ್ಲ.</td></tr>
</table>

ಸಂಖ್ಯೆ: ಅಪಜೀ 158 ಎಫ್‌ಬ್ಲ್ಯೂಎಲ್ 2021

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು